ಚಾಸಾ-3

ಪ್ರಾಸಾ-3

# <u>ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.</u>

**ಸಾಕ್ಷಿದಾರನ ಹೆಸರುಃ ?ಬಸವರಾಜ**
**ತಂದೆಯ ಹೆಸರುಃ ?ಪವಾಡೆಪ್ಪ ಜೊಗನ್ನವರ**
**ವಯಸ್ಸುಃ ??? 45 ವರ್ಷ**
**ಉದ್ಯೋಗಃ ???ಶೇತ್ಕಿ**
**ವಾಸಸ್ಥಳಃ ಜೋಗೆಲ್ಲಾಪೂರ**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ. 22.03.2022.**

**<u>ಮುಖ್ಯ ವಿಚಾರಣೆಃ</u> ಮಾನ್ಯ ಸಸಅ ರವರಿಂದ**

ಈಗ **4** ವರ್ಷಗಳ ಹಿಂದೆ ಸಂಜೆ ಸಮಯದಲ್ಲಿ ನಾನು ಧಾರವಾಡದ ಗ್ರಾಮಿಣ ಪೋಲಿಸ ಠಾಣೆಗೆ ಹೋಗಿದ್ದಾಗ ಅವರು ನನ್ನನ್ನು ನರೇಂದ್ರ ಕ್ರಾಸ ಬಳಿ ಪಂಚನಾಮೆಗೆ ಕರೆದುಕೋಂಡು ಹೋಗಿದ್ದರು. ಸದರಿ ಪಂಚನಾಮೆ ಯಾರಿಗೋ ಒಬ್ಬರಿಗೆ ಬೆದರಿಕೆ ಕರೆ ಬಂದ ವಿಚಾರವಾಗಿ ಮಾಡಲಾಗಿತ್ತು. ಸದರಿ ಸ್ಥಳದಲ್ಲಿ ಪೋಲಿಸರು ಪೋಟೊ ತೆಗೆದು ದಾಖಲೆಗೆ ನನ್ನ ಸಹಿ ಪಡೆದರು. ಸಾಕ್ಷಿ ನಿಪಿ.**2** ಪಂಚನಾಮೆ ಮೇಲಿರುವ ತನ್ನ ಸಹಿಯನ್ನು ನೊಡಿ ಗುರುತಿಸಿದ್ದು ಸದರಿ ಪಂಚನಾಮೆ ಯನ್ನು ಈಗಾಗಲೇ ನಿಪಿ.**2** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.**2**(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.**3** ನಕಾಶೆ ಮೇಲಿರುವ ತನ್ನ ಸಹಿಯನ್ನು ನೊಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.**3**(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಪಂಚನಾಮೆ ಕಾಲಕ್ಕೆ ತೆಗೆದಿರುವ ಪೋಟೊ ವನ್ನು ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**4** ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ.

**<u>( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ</u>**

**ಚಾಸಾ-3**

**ಪ್ರಾಸಾ-3**

**<u>ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ_ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)</u>**

**<u>ಪಾಟೀ ಸವಾಲುಃ ಮಾನ್ಯ ಪ್ರಭಾರಿ ಹಿಸಸ ರವರಿಂದ</u>**

**1.** ದಿಃ **19.05.2018** ರಂದು ಬೆಳಿಗ್ಗೆ **9.00** ರಿಂದ **10.00** ರ ಸಮಯದಲ್ಲಿ ಪೋಲಿಸರು ನನ್ನನ್ನು ಹಾಗೂ ಚಾಸಾ**2** ರವರನ್ನು ನರೇಂದರ ಕ್ರಾಸ ಬಳಿ ಪಂಚನಾಮೆಗಾಗಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಪೋಲಿಸರು ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿ ನಿಪಿ.**2** ಕ್ಕೆ ನನ್ನ ಸಹಿ ಪಡೆದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.</u>**

**1.** ನಿಪಿ.2 ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.3 ನಕಾಶೆಯನ್ನು ಯಾರು ತೆಗೆದಿರು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಪೋಲಿಸರು ಬರೆದಿಟ್ಟ ಪಂಚನಾಮೆಗೆ ನನಗೆ ಸಹಿ ಹಾಕಲು ಕೋರಿಕೊಂಡಿದ್ದರಿಂದ ಹಾಕಿರುತ್ತೇನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.